PW2

ಮೂಲ ದಾವಾ ನಂ. 179/2013

## ಮೆ॥ ಸಿವ್ಹಿಲ್ ನ್ಯಾಯಾಲಯ (ಕಿ.ಶ್ರೇ) ಮುದ್ದೇಬಿಹಾಳ ಇವರ ನ್ಯಾಯಾಲಯದಲ್ಲಿ

1) ಯಲ್ಲವ್ವ ಗಂಡ ಭೀಮಪ್ಪ ಗುಂಡಕರ್ಜಗಿ @ ಚಲವಾದಿ
ಮೃತಳ ವಾರಸುದಾರರು ಹಾಗೂ ಇತರರು .......ವಾದಿಯರು

-ವಿರುದ್ಧ-

1) ದಾವಲಪ್ಪ ತಂದೆ ಮಲ್ಲಪ್ಪ ಚಲವಾದಿ (ಮೃತ)
ಮೃತನ ವಾರಸುದಾರರು ಹಾಗೂ ಇತರರು ......ಪ್ರತಿವಾದಿಯರು

## ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4 ರ ಅಡಿ ವಾದಿಯ ಪರ ಸಾಕ್ಷಿದಾರನ ಮುಖ್ಯ ವಿಚಾರಣೆ ಕುರಿತು ಪ್ರಮಾಣ ಪತ್ರ.

NOTARY
L. S. METI
MUDDEBIHAL
VIJAYAPUR DISTRICT
KARNATAKA
Reg. No: 12476
Exp. Dt: 10-1-2027
GOVT. OF INDIA

ಇದರಲ್ಲಿ ನಾನು ಬಸವರಾಜ ತಂದೆ ಚಂದಪ್ಪ ರಕ್ಕಸಗಿ @ ಹರಿಜನ ವಯಾ: 54 ವರ್ಷ, ಉದ್ಯೋಗ: ಒಕ್ಕಲುತನ ಸಾ॥ ರಕ್ಕಸಗಿ ತಾ॥ ಮುದ್ದೇಬಿಹಾಳ ಜಿ॥ ವಿಜಯಪುರ ಹೀಗೆ ಸತ್ಯ ಪ್ರತಿಜ್ಞಾಪೂರ್ವಕ ಮಾಡುವ ಪ್ರಮಾಣ ಪತ್ರ ಏನೆಂದರೆ.

ಸದರ ದಾವಾದಲ್ಲಿನ ಮೂಲ ವಾದಿಯಾದ ಮೃತ ಯಲ್ಲವ್ವ ಇವಳು ನನ್ನ ದೊಡ್ಡವ್ವ ಇರುತ್ತಾಳೆ. ಅದರಂತೆ 1ನೇ ಪ್ರತಿವಾದಿ ಮೃತ ದಾವಲಪ್ಪ ಚಲವಾದಿ ಈತನು ನನ್ನ ತಾಯಿಯ ಸಹೋದರನಿದ್ದು, ನನಗೆ ಸೋದರ ಮಾವನಾಗುತ್ತಾನೆ. ದಾವಾದಲ್ಲಿನ 3ನೇ ಪ್ರತಿವಾದಿ ನನ್ನ ತಾಯಿ ಇರುತ್ತಾಳೆ. ಹೀಗಾಗಿ ದಾವೆಯಲ್ಲಿನ ವಿಷಯ ಹಾಗೂ ದಾವಾದ ಆಸ್ತಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ.

2) ಸದರಿ ದಾವೆಯನ್ನು ಮೂಲ ವಾದಿಯಾದ ಯಲ್ಲವ್ವ ಗುಂಡಕರ್ಜಗಿ @ ಚಲವಾದಿ ಇವಳು ಪ್ರತಿವಾದಿಯರ ಮೇಲೆ ದಾವಾದ ಆಸ್ತಿಯಾದ ಮುದ್ದೇಬಿಹಾಳ ತಾಲೂಕ ಪೈಕಿ ಬಿದರಕುಂದಿ ಗ್ರಾಮದ

| | ರಿ.ಸ.ನಂ. | ಕ್ಷೇತ್ರ ಎ-ಗು | ಆಕಾರ | ಅಂದಾಜು ಕಿಮ್ಮತ್ತು |
|---|---|---|---|---|
| 1) | 176/1ಅ | 06-23 | 03-28 | 15,00,000=00 |

ನೇದ್ದರ ಆಸ್ತಿಯಲ್ಲಿ ತನಗೆ ಬರಬೇಕಾದ ಸಾಮೂಹಿಕ 1/3 ಹಿಸ್ಸಾವನ್ನು ಸರಸ ನಿರಸ ವಿಂಗಡಿಸಿ ಪ್ರತ್ಯೇಕ ಕಬ್ಜಾ ಪಡೆಯುವ ಕುರಿತು ದಾವೆಯನ್ನು ದಾಖಲಿಸಿದ್ದು

NO. OF CORRECTIONS
6/7/2026
L. S. METI
NOTARY
MUDDEBIHAL, DIST: VIJAYAPUR

ಇರುತ್ತದೆ. ಸದರಿ ದಾವಾದ ಆಸ್ತಿಯನ್ನು ನನ್ನ ತಾಯಿ, ಮೂಲ ವಾದಿಯ ವಾರಸುದಾರರು ಹಾಗೂ ಮೃತ 1ನೇ ಪ್ರತಿವಾದಿಯ ಸಾಮೂಹಿಕ ಮಾಲ್ಕಿ ವ, ಕಬ್ಜಾ ವಹಿವಾಟಿಯಲ್ಲಿ ಇಟ್ಟುಕೊಂಡು ವಹಿವಾಟ ಉಪಭೋಗ ಮಾಡುತ್ತಾ ಬಂದಿದ್ದು ಇರುತ್ತದೆ. ಸದರಿ ದಾವಾ ಆಸ್ತಿಯು ಏಕತ್ರ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದ್ದು ಇರುತ್ತದೆ.

3) ಮೃತ ಮೂಲ ವಾದಿಯಾದ ಯಲ್ಲವ್ವ ಗಂಡ ಭೀಮಪ್ಪ ಗುಂಡಕರ್ಜಗಿ @ ಚಲವಾದಿ ಇವಳಿಗೆ ಪ್ರತಿವಾದಿ ನಂ: 1 ರಿಂದ 3ನೇ ದವರು ಖಾಸಾ ಸಹೋದರರು ಹಾಗೂ ಸಹೋದರಿ ಇರುತ್ತಾರೆ ಅನ್ನುವ ವಿಷಯ ನಿಜವಿರುತ್ತದೆ. ಅವರ ಪೈಕಿ ಪ್ರತಿವಾದಿ ನಂ : 2ನೇದವನು ಈ ಮೊದಲೇ ಸುರಪುರ ತಾಲೂಕ ಪೈಕಿ ವಜ್ಜಲ ಗ್ರಾಮಕ್ಕೆ ದತ್ತಕ ಹೋಗಿದ್ದರಿಂದ ಸದರಿಯವನಿಗೆ ದಾವಾದ ಆಸ್ತಿಯಲ್ಲಿ ಯಾವುದೇ ಹಕ್ಕು ವ, ಹಿತಾಸಕ್ತಿ ಇರುವುದಿಲ್ಲ. ಅದರಂತೆ ಪ್ರತಿವಾದಿ ನಂ 5 ರಿಂದ 10 ನೇದವರು ಅನುಕ್ರಮವಾಗಿ ವಾದಿಯ ಅಣ್ಣನಾದ ಮೃತ ರಂಗಪ್ಪನ ಹೆಂಡತಿ ಹಾಗೂ ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಇರುತ್ತಾರೆ. ಮೂಲ ವಾದಿಯ ಮೃತ ತಂದೆಯಾದ ಮಲ್ಲಪ್ಪನ ಆಸ್ತಿಯಲ್ಲಿ ಕೆಲವೊಂದು ಭಾಗ ವಾಟ್ನಿ ತರೀಕ ಬೇಕಾಯ್ದೆಶೀರ ಮೃತ 1ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ ಮಾಡಿಕೊಂಡಿದ್ದು ಕಾಯ್ದೆಶೀರ ಇರುವುದಿಲ್ಲ. ಸದರಿ ಬೇಕಾಯ್ದೆಶೀರ ಕಾಗದಗಳ ಮೇರೆಗೆ ಸದರಿ ಮೃತ ರಂಗಪ್ಪನ ತಾಯಿ ವ, ಮಕ್ಕಳನ್ನು ನಿಮಿತ್ಯಕ್ಕೆ ಮಾತ್ರ ಪ್ರತಿವಾದಿಯರು ಅಂತಾ ಶಾಮಿಲ್ ಮಾಡಿದ್ದು, ಆದರೆ ಸದರಿ ದಾವಾದ ಆಸ್ತಿಯಲ್ಲಿ ಹಿಸ್ಸೆ ವಗೈರೆ ಬರುವುದಿಲ್ಲ.

4) ಸದರಿ ದಾವಾದ ಆಸ್ತಿಯು ನನ್ನ ದೊಡ್ಡಮ್ಮನಾದ ಮೃತ ವಾದಿಯಾದ ಯಲ್ಲವ್ವ ಗುಂಡಕರ್ಜಗಿ ಮತ್ತು 1 ರಿಂದ 3ನೇ ಪ್ರತಿವಾದಿಯರ ತಂದೆ ವ. ಮೂಲ ಪುರುಷನಾದ ಮೃತ ಮಲ್ಲಪ್ಪ ಚಲವಾದಿ ರವರ ಪಿತ್ರಾರ್ಜಿತ ವ, ಏಕತ್ರ ಕುಟುಂಬದ ಆಸ್ತಿಯಾಗಿದ್ದು ಇರುತ್ತದೆ. ಹೀಗಾಗಿ ಮೃತ ಮೃತ ಮಲ್ಲಪ್ಪ ಈತನು ವಾದಿ ವ. ಪ್ರತಿವಾದಿಯರನ್ನು ತನ್ನ ನೇರ ವಾರಸುದಾರರನ್ನಾಗಿ ಬಿಟ್ಟು ಮೃತವಾಗಿದ್ದು ಇರುತ್ತದೆ. ಸದರಿ ದಾವಾದ ಆಸ್ತಿಯು ಮೃತ ವಾದಿಯ ವಾರಸುದಾರರು ವ, ಪ್ರತಿವಾದಿ ನಂ. 1 ಮತ್ತು 3 ನೇದವರ ಸಾಮೂಹಿಕ ಮಾಲ್ಕಿ ವ. ಕಬ್ಜಾ ವಹಿವಾಟಿಯ ಆಸ್ತಿಯಾಗಿರುತ್ತದೆ. ಅಲ್ಲದೇ ವಾದಿ ವ,

NO. OF CORRECTIONS
L. S. METI
NOTARY
MUDDEBIHAL. DIST. VIJAYAPUR

ಪ್ರತಿವಾದಿ ನಂ: 1, 3ನೇ ದವರ ಮಧ್ಯ ದಾವಾದ ಆಸ್ತಿಯಲ್ಲಿ ಯಾವದೇ ಪಾಲು ವಾಟ್ನಿ ವಗೈರೆ ಆಗಿರುವುದಿಲ್ಲ.

5) ವಿಷಯ ಹೀಗಿರುವಾಗ ಮೈತ ಮೂಲ ವಾದಿ ಹಾಗೂ ಪ್ರತಿವಾದಿ ನಂ: 1, 3 ನೇದವರ ತಂದೆ ಹಾಗೂ ಪ್ರತಿವಾದಿ ನಂ. 4 ನೇದವಳ ಗಂಡನ ತಂದೆಯಾದ ಮೈತ ಮಲ್ಲಪ್ಪ ಈತನ ಮರಣಾ ನಂತರ ದಾವಾದ ಆಸ್ತಿಯಲ್ಲಿ ವಾದಿ ಹಾಗೂ ಉಳಿದ ಪ್ರತಿವಾದಿಯರು ನೇರ ವಾರಸುದಾರರು ಇದ್ದರು ಸಹ ವಾದಿ ಹಾಗೂ ಪ್ರತಿವಾದಿ ನಂ: 1 ಮತ್ತು 3 ನೇದವರ ಕಾಯ್ದೆಶೀರ ಹಕ್ಕನ್ನು ಮುಳಗಿಸಬೇಕೆನ್ನುವ ದುಷ್ಟ ಇರಾದೆಯಿಂದ ಸದರಿ ದಾವಾದ ಆಸ್ತಿಯ ಹರ. ದಲ್ಲಿ 1ನೇ ಪ್ರತಿವಾದಿಯು ದಾವಾದ ಆಸ್ತಿಯಲ್ಲಿ ವಾದಿಯ ಹಾಗೂ ಉಳಿದ ಪ್ರತಿವಾದಿಯರ ನಜರಿಗೆ ಬರದಂತೆ ತನ್ನ ಒಬ್ಬನ ಹೆಸರನ್ನು ಬೇಕಾಯ್ದೆಶೀರವಾಗಿ ದಾಖಲ್ ಮಾಡಿಕೊಂಡಿದ್ದು ಕಾಯ್ದೆಶೀರ ನಡೆಯಲಾರದು.

ಮುಂದುವರೆದು ದಾವಾದ ಆಸ್ತಿಯ ಹೊರ್ತು ಪಡಿಸಿ ಕೆಲವುಂದು ಭಾಗ 1 ನೇ ಪ್ರತಿವಾದಿ ಹಾಗೂ ವಾದಿಯ ಮೈತ ಅಣ್ಣನಾದ ರಂಗಪ್ಪನ ಹೆಂಡತಿ ವ. ಮಕ್ಕಳು ಮಿಲಾಪಾಗಿ ಖೊಟ್ಟಿ ವಾಟ್ನಿ ಪತ್ರವನ್ನು ಸೃಷ್ಟಿಸಿ ಮೈತ ರಂಗಪ್ಪನ ಹೆಸರಿಗೆ ವರ್ಗಾಯಿಸಿದ್ದು ಇರುತ್ತದೆ. ಸದರಿ ವರ್ಗಾವಣೆಯು ಸಹ ಬೇಕಾಯ್ದೆಶೀರ ದಾಖಲ್ ಆಗಿದ್ದರ ಬಗ್ಗೆ ವಾದಿಗೆ ದಾವಾ ದಾಖಲ ಮಾಡುವ ಪೂರ್ವದಲ್ಲಿ ತಿಳಿದು ಬಂದಿರುತ್ತದೆ. ಸದರಿ ಸದರಿ ಬೇಕಾಯ್ದೆಶೀರ ಕಂದಾಯ ದಾಖಲೆ ವಾದಿಯ ಹಾಗೂ 1 ಮತ್ತು 3ನೇ ಪ್ರತಿವಾದಿಯರ ಹಕ್ಕು ವ, ಹಿತಾಸಕ್ತಿಯ ಮೇಲೆ ಭಂದನಕಾರಕ ಇರುವದಿಲ್ಲ. ಸದರಿ ಬೇಕಾಯ್ದೆಶೀರ ಕಂದಾಯ ದಾಖಲೆಗಳು ಮಂಜೂರಾಗುವ ಪೂರ್ವದಲ್ಲಿ ವಾದಿಗಾಗಲಿ ಅಥವಾ 1 ಮತ್ತು 3ನೇ ಪ್ರತಿವಾದಿಗಾಗಲಿ ಮುಂಚಿತ ನೋಟಿಸು ವಗೈರೆ ನೀಡಿರುವುದಿಲ್ಲ. ಹೀಗಾಗಿ ಎಂ. ಆರ್ ಸಂಖ್ಯೆ 175/2003-04 ಬೇಕಾಯ್ದೆಶೀರ ಇದ್ದು, ವಾದಿಯ ಹಾಗೂ 1 ಮತ್ತು 3ನೇ ಪ್ರತಿವಾದಿಯರ ಸಾಮೂಹಿಕ ಹಿಸ್ಸೆಗೆ ಬಂಧನಕಾರಕ ಇರುವದಿಲ್ಲ.

6) ಮುಂದುವರೆದು ನಮ್ಮ ಮಾವನಾದ ಮೈತ 1 ನೇ ಪ್ರತಿವಾದಿಯು ಹಾಗೂ ಅವನ ಮಕ್ಕಳು ದಾವಾದ ಜಮೀನದ ಹ.ರ ದಲ್ಲಿ ತನ್ನೊಬ್ಬನ ಹೆಸರು ದಾಖಲ್ ಇರುವದರಿಂದ, ದಾವಾದ ಅಸ್ತಿಯಾದ ಬಿದರಕುಂದಿ ಗ್ರಾಮದ ರಿ.ಸ.ನಂ. 176/1ಅ ನೇದ್ದನ್ನು ಬೇರೆಯವರಿಗೆ ಮಾರಾಟ ಮಾಡುವ ತಜಿವಿಜಿಯಲ್ಲಿ ಇರುತ್ತಾರೆ ಅನ್ನುವ

NOTARY L. S. METI MUDDEBIHAL VIJAYAPUR DISTRICT KARNATAKA Reg. No: 12476 Exp. Dt: 10-1-2027 GOVT. OF INDIA

NO. OF CORRECTIONS
L. S. METI
NOTARY
MUDDEBIHAL. DIST: VIJAYAPUR

ಸಂಗತಿ ನನಗೆ ಗೊತ್ತಿರುತ್ತದೆ. ಒಂದು ವೇಳೆ ಹಾಗಾದಲ್ಲಿ ವಾದಿಗೆ ದಾವಾದ ಆಸ್ತಿಯಲ್ಲಿನ ತನ್ನ ಸಾಮೂಹಿಕ ಹಿಸ್ಸಾವನ್ನು ಕಳೆದುಕೊಂಡು ತುಂಬಬಾರದ ಹಾನಿ ವ, ಲುಕ್ಸಾನ ಆಗುತ್ತದೆ ಅನ್ನುವ ಸಂಗತಿ ನಿಜವಿರುತ್ತದೆ. ಹೀಗಾಗಿ ಸದರ ದಾವಾದ ಆಸ್ತಿಯಲ್ಲಿ ವಾದಿಯ ವಾರಸುದಾರರು, ಮೃತ 1ನೇ ಪ್ರತಿವಾದಿಯ ವಾರಸುದಾರರು ವ, 3ನೇ ಪ್ರತಿವಾದಿಯು ತಮ್ಮ ಸಾಮೂಹಿಕ ಮಾಲ್ಕಿ ಕಬ್ಜಾ ವಹಿವಾಟಿಯಲ್ಲಿ ಇಟ್ಟುಕೊಂಡು ಉಪಭೋಗ ಮಾಡುತ್ತಾ ಬಂದಿರುತ್ತಾರೆ.

ಕಾರಣ ಮೆ॥ ರವರು ವಾದಿಯು ದಾವೆಯಲ್ಲಿ ಕೇಳಿಕೊಂಡು ಮಾಗಣಿ ಪ್ರಕಾರ ಡಿಕ್ರಿ ಮಾಡುವುದು ನ್ಯಾಯದ ಹಿತದೃಷ್ಟಿಯಿಂದ ಅತೀ ಅವಶ್ಯವಿರುತ್ತದೆ ಅಂತಾ ಸತ್ಯ ಪ್ರತಿಜ್ಞೆ ಮೇರೆಗೆ ಮಾಡಿದ ಪ್ರಮಾಣ ಪತ್ರ ಅದೆ.

ಈ ಮೇಲೆ ಬರೆದ ಯಾವತ್ತೂ ವಿಷಯ ನನ್ನ ಸ್ವಂತ ಮಾಹಿತಿ ವ, ತಿಳುವಳಿಕೆ ಪ್ರಕಾರ ನಿಜವಿರುತ್ತದೆ ಅಂತಾ ಮಾಡಿದ ಪ್ರಮಾಣ ಪತ್ರ.

ಸ್ಥಳ: ಮುದ್ದೇಬಿಹಾಳ
ದಿನಾಂಕ: 06–07–2026

ಪ್ರಮಾಣೀಕರ್ತನ ಸಹಿ

ಪ್ರಮಾಣಪತ್ರ ಮಾಡುವವರ ಪರಿಚಯ ಇರುತ್ತದೆ.

ಆಯ್. ಎಸ್. ಹಗಟಗಿ
ವಕೀಲರು, ಮುದ್ದೇಬಿಹಾಳ

NO. OF CORRECTIONS
L. S. METI
NOTARY
MUDDEBIHAL. DIST: VIJAYAPUR

NOTARY
L. S. METI
MUDDEBIHAL
VIJAYAPUR DISTRICT
KARNATAKA
Reg. No: 12476
Exp. Dt: 10-1-2027
GOVT. OF INDIA

SWORN BEFORE ME
6/7/2026
L. S. METI
ADVOCATE & NOTARY GOVT. OF INDIA
MUDDEBIHAL. DIST: VIJAYAPUR.

ಮೂಲ ದಾವಾ ನಂಃ 179/2013

ಪಿ.ಡಬ್ಲ್ಯೂ- 2

**ದಿಃ 06.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ**

**ನಾನು ನನ್ನ ಮುಖ್ಯ ವಿಚಾರಣೆ ಪತ್ರವನ್ನು ಇಪತ ಪತ್ರದ ಮೂಲಕ ಸಲ್ಲಿಸಿದ್ದು, ಆದರಲ್ಲಿರುವ ಎಲ್ಲಾ ಸಂಗತಿಗಳು ನನ್ನ ಮಾಹಿತಿ ಮತ್ತು ತಿಳುವಳಿಕೆ ಮೇರೆಗೆ ಸತ್ಯವಾಗಿರುತ್ತದೆ.**

ಆದ್ದರಿಂದ ವಾದಿಯ ಪರವಾಗಿ ಆದೇಶ ಮಾಡಬೇಕಾಗಿ ವಿನಂತಿ ಇರುತ್ತದೆ.

**ಪಾಟೀ ಸವಾಲುಃ**

ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರನ್ನು ಕೂಗಿಸಿ ಕರೆಯಲಾಗಿ, ಗೈರ ಹಾಜರ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ಸಿವ್ಹಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.